ದಿನಾಂಕಃ 25.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಶ್ರೀ ಹೆಚ್.ಟಿ.ಎಸ್.ಕೆ.(ಎಲ್.ಎ.ಡಿ.ಸಿ.) ವಕೀಲರಿಂದ ಆರೋಪಿ ಪರವಾಗಿ-</u>

15. ದಿಃ 23.09.2021 ರಂದು ಸಂಜೆ 5.30 ಕ್ಕೆ ನಾನು ಠಾಣಾ ವ್ಯಾಪ್ತಿಯ ಉಪ್ಪಳ್ಳಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದ ಬಗ್ಗೆ ಠಾಣಾ ಡೈರಿಯಲ್ಲಿ ಉಲ್ಲೇಖಿಸಿದ್ದೇನೆ. ನಾನು ಠಾಣಾ ಡೈರಿಯಲ್ಲಿ ಯಾವ ಯಾವ ಸ್ಥಳದಲ್ಲಿ ಗಸ್ತು ಕರ್ತವ್ಯ ಮಾಡಿರುವುದಾಗಿ ಉಲ್ಲೇಖಿಸಿದ್ದೇನೆ. ಫ್ರಾಸಾ.2 ರವರು ಯಾವ ನಂಬರಿನ ಮೂಲಕ ನನ್ನ ಇಲಾಖಾ ನಂಬರಿಗೆ ಕರೆ ಮಾಡಿರುತ್ತಾರೆ ಗೊತ್ತಿಲ್ಲ. ಫ್ರಾಸಾ.2 ರವರು ಯಾವ ನಂಬರಿನ ಮೂಲಕ ನನ್ನ ಇಲಾಖಾ ನಂಬರಿಗೆ ಕರೆ ಮಾಡಿದ್ದಾರೆ ಎಂದು ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ.

16. ಗೌರಿ ಕಾಲುವೆಯ ವಾಟರ್ ಟ್ಯಾಂಕ್ ಹಾಗೂ ಶೃಂಗಾರ್ ಸರ್ಕಲ್ ಅರ್ಧ ಕಿಮೀ ಅಂತರದಲ್ಲಿದೆ ಎಂದರೆ ಇರಬಹುದು. ನಾನು ಚಾಸಾ.33 ರವರಿಗೆ ಸುಧಾರವರು ಮರಣಹೊಂದಿದ ವಿಚಾರವನ್ನು ತಿಳಿಸಿರುತ್ತೇನೆ. ಚಾಸಾ.33 ರವರು ಮೌಖಿಕವಾಗಿ ನನಗೆ ಮುಂದಿನ ಕ್ರಮವನ್ನು ಜರುಗಿಸುವಂತೆ ತಿಳಿಸಿದ ಬಗ್ಗೆ ಠಾಣಾ ಡೈರಿಯಲ್ಲಿ ಉಲ್ಲೇಖಿಸಿಲ್ಲ. ಸ್ಥಳಕ್ಕೆ ಹೋಗಿ ಪರಿಶೀಲಿಸಿದ ನಂತರ ನಾನು ನನ್ನ ಮೇಲಾಧಿಕಾರಿಗಳಿಗೆ ವಿಚಾರವನ್ನು ತಿಳಿಸಿರುವುದಿಲ್ಲ.

17. ಕಲಂ.302 ಐಪಿಸಿ ಘೋರ ಅಪರಾಧವಾಗಿರುತ್ತದೆ ಎಂದರೆ ಸರಿ. ಸದರಿ ಅಪರಾಧವು ಘೋರ ಅಪರಾಧವಾದ ಕಾರಣ ನನಗೆ ಈ ಪ್ರಕರಣದಲ್ಲಿ ತನಿಖೆಯನ್ನು ಮಾಡಲು ಬರುವುದಿಲ್ಲ ಎಂದರೆ ಮೇಲಾಧಿಕಾರಿಗಳ ಆದೇಶದ ಮೇರೆಗೆ ಮಾಡಬಹುದು. ಪ್ರಕರಣದ ತುರ್ತು ವರದಿಯನ್ನು ಮೇಲಾಧಿಕಾರಿಗಳಿಗೆ ನಾನು ಸಲ್ಲಿಸಿದ್ದೇನೆ. ತನಿಖೆಯನ್ನು ಮುಂದುವರೆಸಲು ಇ-ಮೇಲ್ ಮೂಲಕ

ಮೇಲಾಧಿಕಾರಿಗಳಿಂದ ಅನುಮತಿ ಪಡೆದಿರುತ್ತೇನೆ. ಇ-ಮೇಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಇಲಾಖಾ ಡೈರಿಯಲ್ಲಿ ಪ್ರಕರಣದ ತನಿಖೆಯ ಬಗ್ಗೆ ಮಾಹಿತಿಯನ್ನು ಉಲ್ಲೇಖಿಸಿದ್ದೇನೆ ಆದರೆ ಡೈರಿಯನು ಹಾಜರುಪಡಿಸಿಲ್ಲ. ಪೋಲೀಸ್ ಮ್ಯಾನುಯಲ್ ನಲ್ಲಿಯ ನಿಯಮಗಳನ್ನು ಉಲ್ಲಂಘನೆ ಮಾಡಿ ತನಿಖೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಶಾರದಾರವರ ಮನೆಯನ್ನು ಪ್ರಾಸಾ.2 ರವರು ನನಗೆ ತೋರಿಸಿದರು. ನನಗೆ ಮೊದಲಿನಿಂದಲೂ ಶಾರದಾರವರ ಮನೆ ಗೊತ್ತಿಲ್ಲ.

18. ಗೌರಿ ಕಾಲುವೆಯಲ್ಲಿ ಸುಮಾರು ಮನೆಗಳಿವೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ದುಶ್ಯಂತ ಆರಾಮಾಗಿದ್ದರು, ಸಂತೋಷ ದುಃಖದಲ್ಲಿದ್ದರು. ದುಶ್ಯಂತನನ್ನು ವಿಚಾರಿಸಿದಾಗ ಆತ ತನ್ನ ತಾಯಿಯನ್ನು ಖರ್ಚಿಗೆ ಹಣ ಕೊಡುವಂತೆ ಕೇಳಿದ್ದಾಗಿ, ಆಕೆ ಕೊಡದಿದ್ದಾಗ ಆತ ಆಕೆಯ ತಲೆಯನ್ನು ಗೋಡೆಗೆ ಗುದ್ದಿಸಿ ಮತ್ತು ಕಾಲಿನಿಂದ ಒದ್ದು ಸಾಯಿಸಿದ್ದಾಗಿ ತಿಳಿಸಿದನು ಎಂದು ಸ್ಥಳದಲ್ಲಿ ಬರವಣಿಗೆ ಮಾಡಿಲ್ಲ. ಈ ವಿಚಾರವನ್ನು ನಾನು ವಿಡಿಯೋ ಮೂಲಕ ಚಿತ್ರೀಕರಿಸಿಲ್ಲ. ಆ ಕ್ಷಣದಲ್ಲಿ ಪ್ರಕರಣವನ್ನು ದಾಖಲಿಸಿ ಪ್ರವವ ತಯಾರಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

19. ಕೃತ್ಯ ನಡೆದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ಬಿಚ್ಚಿ ಅವುಗಳನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ತಮ್ಮ ಮನೆಯ ಅಡುಗೆ ಮನೆಯ ಮೂಲೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ ಬಗ್ಗೆ ಬರವಣಿಗೆಯನ್ನು ಮಾಡಿಲ್ಲ ಎಂದರೆ ಸರಿ. ಆ ಕಾಲದಲ್ಲಿ ನಾನು ಆರೋಪಿಯ ಮಾನಸಿಕ ಸ್ಥಿತಿಯನ್ನು ಗಮನಿಸಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಸಂತೋಷನನ್ನಾಗಲಿ ಅಕ್ಕಪಕ್ಕದವರನ್ನಾಗಲಿ ಸಂಶಯ ಗೊಂಡು ವಿಚಾರ ಮಾಡಿದ್ದೀರ ಎಂದರೆ ಸಂತೋಷನನ್ನು ವಿಚಾರಣೆ ಮಾಡಿದ್ದೇನೆ. ಸಂತೋಷನನ್ನು ವಿಚಾರಣೆಗೆ ಒಳಪಡಿಸಿದ ಬಗ್ಗೆ ನಾನು

ಮುಖ್ಯ ವಿಚಾರಣೆಯಲ್ಲಿ ನುಡಿದಿಲ್ಲ ಎಂದರೆ ಆತನ ಹೇಳಿಕೆಯನ್ನು ಪಡೆದಿದ್ದೇನೆ ಎಂದು ಹೇಳುತ್ತೇನೆ. ಆ ಸಂದರ್ಬದಲ್ಲಿ ಅಕ್ಕಪಕ್ಕದವರನ್ನು ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸರಿ. ನಾನೇ ಸಂತೋಷರವರನ್ನು ಮನೆಯಿಂದ ಠಾಣೆಗೆ ಕಳುಹಿಸಿ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ನೀಡಲು ಸಂತೋಷನಿಗೆ ತಿಳಿಸಿರುತ್ತೇನೆ ಎಂದು ಸಾಕ್ಷಿ ನುಡಿಯತ್ತಾರೆ. ಘಟನಾ ಸ್ಥಳದಲ್ಲಿ ಸುಮಾರು 20 ನಿಮಿಷ ಇದ್ದೆ.

20. ಆರೋಪಿಯನ್ನು ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಆತ ಸ್ವಾಭಾವಿಕವಾಗಿ ವರ್ತಿಸುತ್ತಿದ್ದ. ಆರೋಪಿಯನ್ನು ವೈದ್ಯರ ಬಳಿ ನಾನು ಕಳುಹಿಸಿಕೊಟ್ಟಿಲ್ಲ. ಘಟನಾ ಸ್ಥಳದಲ್ಲಿದ್ದ ಅಕ್ಕಪಕ್ಕದವರನ್ನು ಆರೋಪಿಯ ಮನಸ್ಥಿತಿ ಬಗ್ಗೆ ವಿಚಾರಣೆಗೆ ಒಳಪಡಿಸಿಲ್ಲ.

21. ಪ್ರಾಸಾ.3 ರವರ ಹತ್ತಿರ ಆರೋಪಿಯ ಮನಸ್ಥಿತಿ ಬಗ್ಗೆ ವಿಚಾರಣೆ ಮಾಡಿಲ್ಲ. ಆರೋಪಿಯು ಪ್ರತಿದಿನ ಆಟೋ ನಿಲ್ದಾಣದಲ್ಲಿರುವ ಅಂಗಡಿಗೆ ಬರುತ್ತಿದ್ದರು, ಆತನ ಯಾರ ಬಳಿಯೂ ಮಾತನಾಡುತ್ತಿರಲಿಲ್ಲ ಎಂದು ಪ್ರಾಸಾ.3 ರವರು ನನ್ನ ಮುಂದೆ ಹೇಳಿಕೆ ನೀಡಿದ್ದರೂ ಸಹ ಅದನ್ನು ನಾನು ಬರೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

22. ನಿಪಿ.12 ರ ಮಹಜರಿನಲ್ಲಿ ಘಟನಾ ಸ್ಥಳವನು ನಾನೇ ತೋರಿಸಿದ್ದೇನೆ ಎಂದು ಉಲ್ಲೇಖಿಸಿದ್ದೇನೆ. ಈ ವಿಚಾರವು ನಿಪಿ.12 ರಲ್ಲಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ನಾನು ಮಾತನಾಡಿದ ವಿಚಾರವನ್ನು ನಿಪಿ.12 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸ್ವಇಚ್ಛೆ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ. ನಾನು ಆರೋಪಿಯ ದಸ್ತಗಿರಿ ಮಾಡಿಲ್ಲ, ಆತನನ್ನು ವಶಕ್ಕೆ ಮಾತ್ರ ಪಡೆದಿದ್ದೇನೆ. ಆರೋಪಿಯ ದಸ್ತಗಿರಿ ಮಾಡದೇ ಆತನ

ಮನೆಗೆ ಹೋಗಿ ಮಹಜರು ಕ್ರಮ ಜರುಗಿಸಿದ್ದೇನೆ ಎಂದರೆ ಸರಿ. ನಿಪಿ.12 ರ ಕಾಲಂ.3 ರಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದವರು ಎಂಬುವುದರಲ್ಲಿ ಏನೂ ನಮೂದಿಸಿಲ್ಲ ಎಂದರೆ ಸರಿ. ನಿಪಿ.12 ರಲ್ಲಿ "ಅವರ ಮೊದಲನೆ ಮಗ ದುಶ್ಯಂತನು ಕೊಲೆ ಮಾಡಿರುವ ವಿಚಾರವನ್ನು ನಮಗೆ ತಿಳಿಸಿ" ಎಂದು ಬರೆದಿದ್ದು ಸರಿ. ಮುಖ್ಯ ವಿಚಾರಣೆಯಲ್ಲಿ ಸಂತೋಷರವರು ಈ ವಿಚಾರವನ್ನು ತಿಳಿಸಿರುವುದಾಗಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನಗೆ ದುಶ್ಯಂತನು ಕೊಲೆ ಮಾಡಿರುವ ವಿಚಾರವನ್ನು ತಿಳಿಸಿದ್ದರೂ ಸಹ ಯಾವುದೇ ತನಿಖೆಯನ್ನು ಮಾಡದೇ ಆರೋಪಿತನೇ ಕೊಲೆ ಮಾಡಿರುವುದಾಗಿ ಪ್ರಕರಣವನ್ನು ದಾಖಲಿಸಿ, ತನಿಖೆಯನ್ನು ಕೈಗೊಂಡಿರುತ್ತೇನೆ ಎಂದರೆ ಸರಿಯಲ್ಲ.

23. ದುಶ್ಯಂತನು ಆಕಾಶ ನೀಲಿ ಬಣ್ಣದ ಜೀನ್ಸ ಪ್ಯಾಂಟು, ತುಂಬುತೋಳಿನ ಚೆಕ್ಸ ಶರಟು ಅವುಗಳಿಗೆ ರಕ್ತದ ಕಲೆ ಅಂಟಿರುವುದು, ಸದರಿ ಪ್ಯಾಂಟು ಮತ್ತು ಶರಟನ್ನು ದುಶ್ಯಂತನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಬಳಿ ಯಾವುದೇ ಮಾಹಿತಿಯನ್ನು ಪಡೆಯದೇ ಸಂತೋಷರವರ ಮಾತು ಕೇಳಿ ಶರಟು ಹಾಗೂ ಪ್ಯಾಂಟನ್ನು ವಶಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ತನಿಖೆಯನ್ನು ಮಾಡದೇ ಸಂತೋಷರವರಿಗೆ ಅನುಕೂಲ ಮಾಡುವ ರೀತಿಯಲ್ಲಿ ಮಹಜರನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

24. ನಾನು ಸಂತೋಷರವರ ಮೊಬೈಲ್ ನಂಬರನ್ನು ಪಡೆದಿಲ್ಲ. ದೂರು ಪಡೆದ ನಂತರ ಹೋಲಿಕ್ರಾಸ್ ಆಸ್ಪತ್ರೆಗೆ ಹೋಗಿ ಸಂತೋಷ ಎಂಬ ವ್ಯಕ್ತಿ ಅಲ್ಲಿಗೆ ಬಂದ ಬಗ್ಗೆ ಸಿಸಿ ಕ್ಯಾಮೆರಾವನ್ನು ನೋಡಿ ಪರಿಶೀಲಿಸಿಲ್ಲ. ಚಾಸಾ.14 ಮತ್ತು 15 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ವಿಚಾರಣೆಗೆ ಒಳಪಡಿಸಿಲ್ಲ.

ಆರೋಪಿಯು Chronic Phychosis Schizophrenia ಕಾಯಿಲೆಯಿಂದ ಬಳಲುತ್ತಿದ್ದ ಬಗ್ಗೆ ತನಿಖೆಯನ್ನು ಕೈಗೊಂಡಿಲ್ಲ.

25. ದಿಃ 13.05.2015 ರಿಂದ ಆರೋಪಿಯು ಸದರಿ ಕಾಯಿಲೆ ಕುರಿತು ಚಿಕಿತ್ಸೆಯನ್ನು ಪಡೆಯುತ್ತಿದ್ದ ಬಗ್ಗೆ ತನಿಖೆಯನ್ನು ಕೈಗೊಂಡಿಲ್ಲ ಎಂದರೆ ಸರಿ. ಕಾರಣ ಆತನು ಸದರಿ ಕಾಯಿಲೆಯಿಂದ ಬಳಲುತ್ತಿದ್ದ ಬಗ್ಗೆ ನನಗೆ ವಿಚಾರ ಗೊತ್ತಿರಲಿಲ್ಲ.

26. ನಾನು ದಿಃ 24.09.2021 ರಂದು ಆರೋಪಿಯನ್ನು ವೈದ್ಯರ ಬಳಿ ಕರೆದುಕೊಂಡು ಹೋದಾಗ ಅವರು ಅವರ ವರದಿಯಲ್ಲಿ disturbed ಎಂದು ಉಲ್ಲೇಖಿಸಿದ್ದಾರೆ ಎಂದರೆ ನಾನು ಅದರ ಬಗ್ಗೆ ತನಿಖೆಯನ್ನು ಕೈಗೊಂಡಿಲ್ಲ. ಗೌರಿಕಾಲುವೆ ವಾಟರ್ ಟ್ಯಾಂಕ್ ಬಳಿ ಸಿಸಿ ಕ್ಯಾಮೆರಾವನ್ನು ಅಳವಡಿಸಿದ ಬಗ್ಗೆ ನಾನು ತನಿಖೆ ಕೈಗೊಂಡಿಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಪ್ರಾಥಮಿಕ ತನಿಖೆಯನ್ನು ಕೈಗೊಂಡಿಲ್ಲ ಎಂದರೆ ಸರಿಯಲ್ಲ.

27. ನಾನು ಚಾಸಾ.2 ಮತ್ತು 3 ರವರಿಗೆ ಮಹಜರಿಗೆ ಬರುವಂತೆ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮಹಜರು ಮಾಡಿದ ನಂತರ ಚಾಸಾ.2 ಮತ್ತು 3 ರವರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ತನಿಖೆಯನ್ನು ಕೈಗೊಳ್ಳದೇ ಚಾಸಾ.1 ರವರ ಮಾತು ಕೇಳಿ ಸುಳ್ಳು ತನಿಖೆ ಮಾಡಿ, ಸುಳ್ಳು ಪ್ರವವ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಾಥಮಿಕ ತನಿಖೆ ಕೈಗೊಂಡ ಬಗ್ಗೆ ಯಾವುದೆ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮಹಜರು ಕಾಲದಲ್ಲಿ ವಶಪಡಿಸಿಕೊಂಡ ಸ್ವತ್ತನ್ನು ಆರೋಪಿ ದುಶ್ಯಂತನು ತೋರಿಸಿಲ್ಲ ಎಂದರೆ ಸರಿಯಲ್ಲ.

28. ನಾನು ಮಹಜರು ಕಾಲಕ್ಕೆ ವಶಪಡಿಸಿಕೊಂಡ ಸ್ವತ್ತುಗಳು ಆರೋಪಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ

ಅಕ್ಕಪಕ್ಕದಲ್ಲಿ ಸಿಸಿ ಕ್ಯಾಮೆರಾವನು ಅಳವಡಿಸಲಾಗಿದ್ದರೂ ಅದನ್ನು ಸಂಗ್ರಹಿಸಿಲ್ಲ ಎಂದರೆ ಸರಿ. ನಿಪಿ.3 ಭಾವಚಿತ್ರವನ್ನು ಮನೆಯ ಒಳಗಿಂದ ತೆಗೆಯಲಾಗಿದೆ ಎಂದರೆ ಸರಿ. ನಿಪಿ.3 ಮತ್ತು 4 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನೀಲಿ ಬಣ್ಣದ ಜೀನ್ಸಪ್ಯಾಂಟು ಹಾಗೂ ತುಂಬುತೋಳಿನ ಶರಟನ್ನು ಯಾವ ಹಾಲಿನಿಂದ ವಶಪಡಿಸಿಕೊಂಡಿದ್ದೇನೆ ಎಂದು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾಧ ಕುಲಕರ್ಣಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ